**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ.**

**ಸಿ.ಸಿ. ನಂ. 6402/2021**

| | | |
|---|---|---|
| **ಹಸರುಃ** | **ಜಯಪ್ಪ** | **ದೋ.ಸಾಃ 16** |
| **ತಂದೆಯ ಹೆಸರುಃ** | **ಬತ್ಯಪ್ಪ** | **ಪ್ರಾ.ಸಾಃ 18** |
| **ವಯಸ್ಸುಃ** | **55 ವರ್ಷ** | **ದಿನಾಂಕಃ 20-02-2025** |
| **ಉದ್ಯೋಗಃ** | **ಸಿವಿಲ್ ಕಾಂಟ್ರಾಕ್ಟರ್** | |
| **ವಾಸಸ್ಥಳಃ** | **ಬೆಂಗಳೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ–1 ಮತ್ತು 17 ಗೊತ್ತು.

ಈಗ ನನಗೆ ತೋರಿಸಲಾದ ನಿ.ಪಿ.–5 ರ ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿಪಿ–5(ಡಿ) ಎಂದು ಗುರುತಿಸಲಾಯಿತು.

ದಿನಾಂಕ 03.09.2020 ರಂದು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಚಾಸಾ–1 ಮತ್ತು 1 ನೇ ಆರೋಪಿ ವಾಸವಿದ್ದ ಬಾಡಿಗೆ ಮನೆಯಲ್ಲಿ ಅವರಿಬ್ಬರ ನಡುವೆ ಗಲಾಟೆಯಾಗಿದ್ದ ಸಂಬಂಧ ಪೊಲೀಸರು ಬಂದು ಮಹಜರ್ ಮಾಡಿ ನಿ.ಪಿ.–5 ರ ದಾಖಲೆಯನ್ನು ಬರೆದು ನನ್ನ ಸಹಿ ಪಡೆದರು. ಆಗ ಚಾಸಾ–1 ಮತ್ತು 17 ರವರು ಸಹ ಇದ್ದರು ಮತ್ತು ಅವರು ನಿ.ಪಿ.–5 ರ ದಾಖಲೆಗೆ ಸಹಿ ಮಾಡಿದರು. ಪಂಚನಾಮೆ ಬರೆದಾಗ ಸಂಜೆ 03–00 ರಿಂದ 04–00 ಆಗಿತ್ತು.

ಪಂಚನಾಮೆಯ ಸಂದರ್ಭದಲ್ಲಿ ಪೊಲೀಸರು ಈಗ ನನಗೆ ತೋರಿಸಲಾದ ನಿ.ಪಿ.–6 ಮತ್ತು 7 ಫೋಟೋಗಳನ್ನು ಪಡೆದುಕೊಂಡರು.

ಈ ಪ್ರಕರಣದ ಸಂಬಂಧ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ಸದರಿ ಹೇಳಿಕೆಯಲ್ಲಿ ನಿ.ಪಿ.–5 ರ ಪಂಚನಾಮೆ ಸಂಬಂಧ ಹೇಳಿರುತ್ತೇನೆ. ಬೇರೆ ವಿಷಯಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರು ಜರುಗಿಸಿದ ಪಂಚನಾಮೆಗೆ ಮತ್ತು ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 08.09.2020 ರಂದು ಚಾಸಾ–1 ಮತ್ತು 1 ನೇ ಆರೋಪಿ ವಾಸವಿದ್ದ ಹಾಗೂ ಬೆಂಗಳೂರಿನ ಮಾಲತ್ ಹಳ್ಳಿ ಜ್ಞಾನಗಂಗಾ ನಗರದಲಿಲರುವ ಚಾಸಾ–13 ರವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ಪೊಲೀಸರು ನಿ.ಪಿ.–5 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ.

ಚಾಸಾ–1 ರವರ ಚಿಕ್ಕಪ್ಪ ಚಾಸಾ–5 ರವರ ಮೂಲಕ ನನಗೆ 1 ನೇ ಆರೋಪಿಗೆ ಚಾಸಾ–1 ರವರ ತಂದೆ–ತಾಯಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿರುವ ವಿಚಾರ ಗೊತ್ತಾಯಿತು ಎಂದರೆ ಸರಿ. ಚಾಸಾ– 1 ಮತ್ತು ಅವರ ಗಂಡನ ನಡುವೆ ವೈಮನಸು ಉಂಟಾಗಿದ್ದ ಸಂಬಂಧ ದಿಃ 15.02.2021 ರಂದು ನಾನು ಮತ್ತು ಇತರರು ಚನ್ನರಾಯ ಪಟ್ಟಣ್ಣದ ದೊಡ್ಡ ಎರಗನಾಳ್ ಗ್ರಾಮದಲ್ಲಿ ಪಂಚಾಯತಿ ಮಾಡಿದ್ದೆವು ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ಆರೋಪಿತರು ಚಾಸಾ–1 ರವರಿಗೆ ವರದಕ್ಷಿಣೆ ಸಲುವಾಗಿ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುವ ವಿಚಾರ ಗೊತ್ತಾಯಿತು ಎಂದರೆ ಸರಿ. ಪಂಚಾಯತಿಯಲ್ಲಿ ಆರೋಪಿತರು ಹೆಚ್ಚಿನ ವರದಕ್ಷಿಣೆ ತಂದರೆ ಮಾತ್ರ ಚಾಸಾ–1 ರವರನ್ನು ಮನೆಗೆ ಸೇರಿಸುವುದಾಗಿ ಹೇಳಿದ್ದರು ಎಂದರೆ ಸರಿ.

ಮೇಲ್ಕಂಡ ಎಲ್ಲ ವಿಚಾರಗಳನ್ನು ದಿನಾಂಕ 21.09.2020 ರಂದು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎನ್.ಎಸ್.ಆರ್ ವಕೀಲರಿಂದಃ**

ಮಹಜರಿಗೆ ಸಾಕ್ಷಿಯಾಗಿ ಸಹಕರಿಸುವಂತೆ ಪೊಲೀಸರು ನನಗೆ ನೋಟಿಸು ಕೊಟ್ಟಿರಲಿಲ್ಲ. ನಿ.ಪಿ.–5 ರ ದಾಖಲೆಯನ್ನು ನಾನು ಓದಿದ್ದೇನೆ. ಪೊಲೀಸರ ಒತ್ತಾಯದ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–5 ರ ಪಂಚನಾಮೆ ಜರುಗಿಸಲಾದ ಮನೆಯ

ಚಕ್ಕುಬಂಧಿ ಹೇಳಲು ಆಗುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ದಾಖಲೆಯಲ್ಲಿ ಪೊಲೀಸರು ಬರೆದಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮೂಲತಃ ಆಂಧ್ರ ಪ್ರದೇಶದವನಾಗಿರುವುದರಿಂದ ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ನನ್ನ ಸಂಬಂಧಿಯಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಬೇರೆ ಎಷ್ಟು ಪ್ರಕರಣಗಳಲ್ಲಿ ಸಾಕ್ಷಿ ಹೇಳಿದ್ದೇನೆ ಎಂದು ಗೊತ್ತಿಲ್ಲ. ಸಿಸಿ ಸಂಖ್ಯೆ 4642/2020 ರಲ್ಲೂ ಸಹ ನಾನು ಮಹಜರ್ ಸಾಕ್ಷಿಯಾಗಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದ ಫಿರ್ಯಾದಿ ನನಗೆ ಬೆಂಗಳೂರಿಗೆ ಬಂದಾಗ ಪರಿಚಯವಾಗಿದ್ದರು. ಅವರ ಹೆಸರು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಖುದ್ದು ಮಾಹಿತಿ ಇಲ್ಲದಿದ್ದರೂ ಚಾಸಾ-1 ರವರ ತಂದೆಯ ಮಾತು ಕೇಳಿಕೊಂಡು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

ನಾನು ಹೇಳಿದಂತೆ ದಿನಾಂಕ 15.05.2020 ರಂದು ನಾನು ಯಾವುದೇ ಪಂಚಾಯತಿಗೆ ಹೋಗಿಲ್ಲ ಮತ್ತು ನನ್ನ ಮುಂದೆ ಯಾವುದೇ ಪಂಚಾಯತಿ ನಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ಸುಮಾರು 20 ಜನ ಸೇರಿದ್ದರು, ಅವರ ಎಲ್ಲರ ಹೆಸರು ಗೊತ್ತಿಲ್ಲ. ಸರ್ಕಾರಿ ಅಭಿಯೋಜಕರು ನನ್ನನ್ನು ಪಾಟೀ ಸವಾಲು ಮಾಡಿದಾಗ ನಾನು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕುಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾದಂ.**

**ಭದ್ರಾವತಿ**